ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560012.**

**ಸಂಖ್ಯೆ:ಪಪೂಶಿಇ/ಶೈಶಾ/** ಎನ್.ಸಿ.ಇ.ಆರ್.ಟಿ/ಪು.ನಿ/2017-2018 ದಿನಾಂಕ:-20/7/2017

**ಸುತ್ತೋಲೆ**

**ವಿಷಯ:-** ಎಸ್.ಸಿ.ಪಿ/ ಟಿ.ಎಸ್.ಪಿ ಅನುದಾನದಡಿ ಸ್ಥಾಪಿಸಲಾದ ಪಠ್ಯಪುಸ್ತಕ ನಿಧಿ ಯೋಜನೆಯಲ್ಲಿ ವಿತರಿಸಲಾದ ಪಠ್ಯಪುಸ್ತಕಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವ ಬಗ್ಗೆ

------

2016-2017 ನೇ ಸಾಲಿನ ಎಸ್.ಸಿ.ಪಿ/ ಟಿ.ಎಸ್.ಪಿ ಅನುದಾನದಡಿ ಪಠ್ಯಪುಸ್ತಕ ನಿಧಿ ಸ್ಥಾಪಿಸಿ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಎಸ್.ಸಿ/ಎಸ್.ಟಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳನ್ನು ವಿತರಿಸಲು ಸೂಚಿಸಲಾಗಿತ್ತು. ವಿತರಿಸಿರುವ ಪುಸ್ತಕಗಳ ವಿವರಗಳನ್ನು ವಿದ್ಯಾರ್ಥಿ/ವಿದ್ಯಾರ್ಥಿನಿವಾರು ಆನ್‌ಲೈನ್‌ನಲ್ಲಿ ಮಾಹಿತಿ ನಮೂದಿಸ ಬೇಕಿದೆ. ಪ್ರಸ್ತುತ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳ ಮಾಹಿತಿ ಮಾತ್ರ online ನಲ್ಲಿ ಲಭ್ಯವಿದ್ದು, ಮಾಹಿತಿಯನ್ನು ನಮೂದಿಸುವುದು. ಪ್ರಥಮ ಪಿಯುಸಿಯ ಮಾಹಿತಿಯು online ನಲ್ಲಿ ಅಳವಡಿಸದ ನಂತರ ಮಾಹಿತಿಯನ್ನು ಅಳವಡಿಸಲು ಸೂಚಿಸಿದೆ. ಪ್ರಯುಕ್ತ ಈ ಕೆಳಗಿನ ಸೂಚನೆಗಳಂತೆ, ಕ್ರಮವಹಿಸಲು ಸೂಚಿಸಿದೆ.

1) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಇಲಾಖಾ ವೆಬ್‌ಸೈಟ್ pue.kar.nic.in ನಲ್ಲಿರುವ PUC online portal ಗೆ ಲಾಗ್‌ಇನ್ ಆಗುವುದು.
2) Portal ನಲ್ಲಿ BOOK BANK ಎಂಬ ಮೆನುವನ್ನು ಕ್ಲಿಕ್ ಮಾಡುವುದು.
3) ಮೆನುನಲ್ಲಿ ELIGIBLE STUDENTS LIST ಯನ್ನು ಕ್ಲಿಕ್ ಮಾಡುವುದು. ಕಾಲೇಜಿನಲ್ಲಿ ದಾಖಲಾಗಿರುವ ಎಲ್ಲಾ ಎಸ್.ಸಿ/ಎಸ್.ಟಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೆಸರುಗಳು ಕಾಣಿಸಿಕೊಳ್ಳುತ್ತವೆ.
4) ಪಠ್ಯಪುಸ್ತಕಗಳನ್ನು ವಿತರಿಸಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೆಸರಗಳನ್ನು ಕ್ಲಿಕ್‌ಮಾಡಬೇಕು.
5) ಸಂಬಂಧಿಸಿದ ಪಠ್ಯಪುಸ್ತಕಗಳ ವಿವರಗಳು ಕಾಣಿಸಿಕೊಳ್ಳುತ್ತವೆ.
6) ವಿತರಿಸಿರುವ ಪಠ್ಯಪುಸ್ತಕಗಳನ್ನು ಗುರುತು ಹಾಕುವುದು ಮತ್ತು ವಿತರಿಸಿದ ದಿನಾಂಕವನ್ನು ನಮೂದಿಸುವುದು.
7) ಪಠ್ಯಪುಸ್ತಕಗಳ ಒಟ್ಟು ಸೆಟ್‌ನ್ನು ವಿದ್ಯಾರ್ಥಿಗಳಿಗೆ ವಿತರಿಸಬೇಕೆಂಬ ಬಗ್ಗೆ ಈ ಹಿಂದೆ ಸೂಚನೆಗಳನ್ನು ನೀಡಿರುವುದನ್ನು ಗಮನದಲ್ಲಿಟ್ಟುಕೊಳ್ಳುವುದು.
8) ಎಲ್ಲಾ ವಿವರಗಳು ಭರ್ತಿಮಾಡಿದ ನಂತರ submit ನ್ನು ಕ್ಲಿಕ್ ಮಾಡುವುದು. ನಂತರ ಪ್ರತಿ ವಿದ್ಯಾರ್ಥಿಯ ವರದಿಯನ್ನು ಕಂಪ್ಯೂಟರಿಂದ ಪಡೆದು, ವಿದ್ಯಾರ್ಥಿಗಳಿಂದ ಸಹಿಮಾಡಿಸಿ ಕಡತದಲ್ಲಿ ಶೇಖರಿಸುವುದು.

Scanned by CamScanner

9) ವರ್ಷದ ಕೊನೆಗೆ ಪಠ್ಯಪುಸ್ತಕಗಳನ್ನು ಮರಳಿ ಪಡೆದ ಮೇಲೆ ದಿನಾಂಕವನ್ನು ಕಂಪ್ಯೂಟರ್‌ನಲ್ಲಿ ಮೇಲೆ ತಿಳಿಸಿದ ವಿಧಾನದಲ್ಲಿ ಸದರಿ ವಿದ್ಯಾರ್ಥಿಯ ಮಾಹಿತಿಯಲ್ಲಿ update ಮಾಡುವುದು.

10) ಪಠ್ಯಪುಸ್ತಕಗಳನ್ನು ವಿತರಿಸಿದ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ತಪ್ಪದೆ ದಿನಾಂಕ 24.07.2017 ರಿಂದ 10.08.2017 ರೊಳಗೆ online ನಲ್ಲಿ ನಮೂದಿಸುವುದು.

11) ಕಾಲೇಜುಗಳ ಪ್ರಾಂಶುಪಾಲರು ಸೂಚಿಸಿದ ದಿನಾಂಕದೊಳಗೆ ಮಾಹಿತಿಯನ್ನು ನಮೂದಿಸಿರುವುದನ್ನು ಜಿಲ್ಲಾ ಉಪ ನಿರ್ದೇಶಕರು ತಪ್ಪದೆ ಖಾತ್ರಿಪಡಿಸಿಕೊಳ್ಳುವುದು.

12) ಜಿಲ್ಲಾ ಉಪನಿರ್ದೇಶಕರಿಗೆ ವಿತರಿಸಿರುವ ಪಠ್ಯಪುಸ್ತಕಗಳ ಒಟ್ಟು ಸಂಖ್ಯೆಯು ಜಿಲ್ಲೆಯ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು online ನಲ್ಲಿ ನಮೂದಿಸಿರುವ ಸಂಖ್ಯೆಗೆ ಸಮನಾಗಬೇಕು.

13) ಕೊರತೆ ಸಂಖ್ಯೆ ಬಂದಲ್ಲಿ ಸಂಬಂಧಿಸಿದ ಜಿಲ್ಲೆಗಳ ಉಪ ನಿರ್ದೇಶಕರು ಲಿಖಿತ ವಿವರಣೆಯನ್ನು ನೀಡಬೇಕಾಗುತ್ತದೆ. ಪ್ರಯುಕ್ತ ಜಿಲ್ಲಾ ಉಪನಿರ್ದೇಶಕರು ತಮಗೆ ವಿತರಿಸಿದ ಪಠ್ಯಪುಸ್ತಕಗಳ ಮಾಹಿತಿಯು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು online ನಲ್ಲಿ ನಮೂದಿಸುವುದನ್ನು ಖಚಿತಪಡಿಸಿಕೊಳ್ಳುವುದು.

14) ದಿನಾಂಕ 10.08.2017 ರ ಸಂಜೆ 5:30ಕ್ಕೆ ಮಾಹಿತಿ ನಮೂದಿಸಲು ನೀಡುವ ದಿನಾಂಕವು ಕೊನೆಗೊಳ್ಳುತ್ತದೆ. ನಂತರ ಮಾಹಿತಿ ಅಳವಡಿಸಲು ಅವಕಾಶ ಇರುವುದಿಲ್ಲ ಎಂಬುದನ್ನು ಗಮನಿಸುವುದು.

15) ಮಾಹಿತಿಯನ್ನು ಅಳವಡಿಸದ ಪ್ರಾಂಶುಪಾಲರು ಹಾಗೂ ಜಿಲ್ಲಾ ಉಪ ನಿರ್ದೇಶಕರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

20/7/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ– ಅಗತ್ಯ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಜಿಲ್ಲಾ ಉಪ ನಿರ್ದೇಶಕರ ಮೂಲಕ –ಅಗತ್ಯ ಕ್ರಮಕ್ಕಾಗಿ.
3) ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ –ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.

Scanned by CamScanner